# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 803 |
| ಸದಸ್ಯರ ಹೆಸರು | ಶ್ರೀ ಚಂದ್ರಶೇಖರ ಬಸವರಾಜ ಪಾಟೀಲ್ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 19.08.2025 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಎರಡು ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಹೊಸದಾಗಿ ಎಷ್ಟು ಗಣಿ ಪರವಾನಿಗೆ ನೀಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಕಳೆದ ಎರಡು ವರ್ಷಗಳಲ್ಲಿ ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಮಂಜೂರು ಮಾಡಿರುವ ಮುಖ್ಯ ಖನಿಜ /ಉಪಖನಿಜ ಗಣಿ ಗುತ್ತಿಗೆಗಳ ವಿವರ ಕೆಳಕಂಡಂತಿದೆ: |

| ಕ್ರ. ಸಂ. | ಜಿಲ್ಲೆ | ಮುಖ್ಯ ಖನಿಜ ಗಣಿ ಗುತ್ತಿಗೆಗಳ ಸಂಖ್ಯೆ | ಉಪಖನಿಜ ಗಣಿ ಗುತ್ತಿಗೆಗಳ ಸಂಖ್ಯೆ |
|---|---|---|---|
| 1 | ಬಳ್ಳಾರಿ | 04 | 07 |
| 2 | ವಿಜಯನಗರ | 0 | 12 |
| 3 | ರಾಯಚೂರು | 0 | 24 |
| 4 | ಕೊಪ್ಪಳ | 0 | 75 |
| 5 | ಕಲಬುರಗಿ | 0 | 26 |
| 6 | ಬೀದರ್ | 0 | 10 |
| 7 | ಯಾದಗಿರಿ | 0 | 06 |
| | ಒಟ್ಟು | 04 | 160 |

| | | |
|---|---|---|
| ಆ) | ಗಣಿ ಪರವಾನಿಗೆ ನೀಡಲು ಸರ್ಕಾರ ವಿಧಿಸಿದ ಮಾನದಂಡಗಳೇನು? (ಮಾಹಿತಿ ನೀಡುವುದು) | ಗಣಿ ಪರವಾನಿಗೆ ನೀಡಲು ಇರುವ ಮಾನದಂಡಗಳು ಈ ಕೆಳಕಂಡಂತಿವೆ:-<br><br>1. ಮುಖ್ಯ ಖನಿಜಗಳ ಸಂಬಂಧ ಖನಿಜಗಳ ಲಭ್ಯತೆ ದೃಢಪಟ್ಟಿರುವ ಪ್ರದೇಶಗಳಲ್ಲಿ ಎಂಎಂಡಿಆರ್ ತಿದ್ದುಪಡಿ ಕಾಯ್ದೆ, 2015 ರ ಕಲಂ 10(B) ರಡಿಯಲ್ಲಿ ಹರಾಜು ಮೂಲಕ ಗಣಿಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ. ಖನಿಜ ಲಭ್ಯತೆ ದೃಢಪಡದ ಪ್ರದೇಶಗಳಲ್ಲಿ ಎಂಎಂಡಿಆರ್ ತಿದ್ದುಪಡಿ ಕಾಯ್ದೆ, 2015 ರ ಕಲಂ 11 ರಡಿಯಲ್ಲಿ ಸಂಯುಕ್ತ ಪರವಾನಿಗೆ (Composite Licence) (Prospecting-cum-Mining Lease) ನ್ನು ಸದರಿ ಕಾಯ್ದೆಯಡಿಯಲ್ಲಿ ರೂಪಿಸಲಾದ Mineral (Auction) Rules, 2015ರ ನಿಯಮ 9(4) ಮತ್ತು 10 ರಂತೆ ಹರಾಜು ಮಾಡಿ ಯಶಸ್ವಿಯಾದ ಬಿಡ್‌ದಾರರನ್ನು ಪರಿಗಣಿಸಿದ ನಂತರ The Mineral (Auction) Rules, 2015 ಮತ್ತು Mineral (Other Than Atomic and Hydro Carbons Energy Minerals) Concession Rules 2016 ರಡಿ ಗಣಿಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ.<br><br>2. ಎಂ.ಎಂ. (ಡಿ & ಆರ್) 1957 ರ ಸೆಕ್ಷನ್-15 ರಂತೆ ರಾಜ್ಯ ಸರ್ಕಾರಗಳಿಗೆ ನೀಡಿರುವ ಅಧಿಕಾರದನ್ವಯ ರಾಜ್ಯದಲ್ಲಿ ಉಪಖನಿಜಗಳ ಗಣಿಗಾರಿಕೆಗೆ ಗುತ್ತಿಗೆ ಮಂಜೂರಾತಿ ನಿಯಂತ್ರಣ ಕುರಿತು ಕೆಎಂಎಂಸಿ ನಿಯಮಗಳು, 1994ನ್ನು ಜಾರಿಗೆ ತರಲಾಗಿದ್ದು, ಸದರಿ ನಿಯಮಗಳಂತೆ ಉಪಖನಿಜಗಳ ಗಣಿಗಾರಿಕೆಗೆ ಗುತ್ತಿಗೆಗಳನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. |

| | | |
|---|---|---|
| | | 3. ಸರ್ಕಾರಿ ಜಮೀನುಗಳಲ್ಲಿ ಲಭ್ಯವಿರುವ ಉಪಖನಿಜ ನಿಕ್ಷೇಪಗಳನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಗುರುತಿಸಿ ಕಂದಾಯ ಮತ್ತು ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದ ನಂತರ ಅಧಿಸೂಚನೆ ಜಾರಿ ಮಾಡಬೇಕಾಗಿರುತ್ತದೆ. ನಂತರ ಜಿಲ್ಲಾ ಟಾಸ್ಕ ಫೋರ್ಸ್ (ಗಣಿ) ಸಮಿತಿಯಿಂದ ಗುರುತಿಸಿರುವ ಉಪಖನಿಜದ ನಿಕ್ಷೇಪದ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ನಿಯಮಾನುಸಾರ ಟೆಂಡರ್ ಕಂ ಹರಾಜು ಪ್ರಕ್ರಿಯೆ ಕೈಗೊಂಡು ನಿರ್ಧಿಷ್ಟ ಉಪಖನಿಜಗಳಿಗೆ ಸರ್ಕಾರದಿಂದ ಮತ್ತು ನಿರ್ಧಿಷ್ಟವಲ್ಲದ ಉಪಖನಿಜಗಳಿಗೆ ಸಂಬಂಧಿಸಿದಂತೆ ನಿರ್ದೇಶಕರಿಂದ ಬಿಡ್ ಸ್ಥಿರೀಕರಿಸಿಕೊಂಡ ನಂತರ ಯಶಸ್ವಿ ಬಿಡ್ ದಾರರಿಂದ ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಪಡೆದು ಗುತ್ತಿಗೆಯನ್ನು ಮಂಜೂರು ಮಾಡಲಾಗುತ್ತದೆ.<br><br>4. ಪಟ್ಟಾ ಜಮೀನುಗಳಲ್ಲಿ ಉಪಖನಿಜಗಳ ಗಣಿಗಾರಿಕೆಗೆ ಪಟ್ಟಾದಾರರಿಗೆ ಅಥವಾ ಪಟ್ಟಾದಾರರು ಒಪ್ಪಿಗೆ ನೀಡುವ ವ್ಯಕ್ತಿಗಳಿಗೆ ಕಂದಾಯ ಮತ್ತು ಅರಣ್ಯ ಇಲಾಖೆ ನಿರಾಕ್ಷೇಪಣಾ ಪತ್ರ, ಭೂಪರಿವರ್ತನೆ ಆದೇಶ, ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಪಡೆದು ಜಿಲ್ಲಾ ಟಾಸ್ಕ ಫೋರ್ಸ್ (ಗಣಿ) ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆದು ನಿಯಮಾನುಸಾರ ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರು/ಹಿರಿಯ ಭೂವಿಜ್ಞಾನಿ ರವರಿಂದ ಕಲ್ಲುಗಣಿಗಾರಿಕೆಗೆ ಲೈಸೆನ್ಸ್ ನೀಡಲಾಗುತ್ತಿದೆ. |

ಸಂಖ್ಯೆ ಸಿಐ -ಎಂಎಂಎನ್/216/2025

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.